ಟೀಮನ್ನು ಕಳುಹಿಸಿ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಎಂದು ಮಾನ್ಯ ರಘುಪತಿ ಭಟ್‌ರವರು ಹೇಳಿದ್ದಾರೆ. ಈ ಇಲಾಖೆಗೆ ನಾವು ಇನ್ನೂ ಸಚಿವರನ್ನು ನೇಮಕ ಮಾಡಿಲ್ಲ. ಈ ಖಾತೆ ಮುಖ್ಯಮಂತ್ರಿಗಳ ಹತ್ತಿರವೇ ಇದೆ. ಆದ್ದರಿಂದ, ನಾನು ಮುಖ್ಯಮಂತ್ರಿಗಳಿಗೆ ಈ ವಿಚಾರವನ್ನು ಇವತ್ತೇ ತಿಳಿಸಿ, ಸಂಬಂಧಪಟ್ಟ ಅಧಿಕಾರಿಗಳಿಂದ ವರದಿಗಳನ್ನು ತರಿಸಿಕೊಂಡು ಕ್ರಮ ತೆಗೆದುಕೊಳ್ಳುವಂಥ ಭರವಸೆಯನ್ನು ಕೊಡುವುದರ ಜೊತೆಗೆ ಅಲ್ಲಿಯ ಮೀನುಗಾರರಿಗೆ ಆಗಿರುವಂಥ ತೊಂದರೆ ಮತ್ತು ಅವರಿಗೆ ನೀಡಬೇಕಾಗಿರುವಂಥ ರಕ್ಷಣೆ ಇವೆರಡರ ಬಗ್ಗೆಯೂ ನಾನು ಪ್ರಸ್ತಾಪ ಮಾಡಿ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ. ಸೀಬರ್ಡ್ ಯೋಜನೆ ಬಗ್ಗೆ ಅವರು ಹೇಳಿದ್ದಾರೆ. ಸೀಬರ್ಡ್ ಯೋಜನೆಯಿಂದ ಆಗುತ್ತಿರುವಂತ ತೊಂದರೆಗಳು, ಇತ್ಯಾದಿ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ತಾವು ಇದರ ಬಗ್ಗೆ ಸವಿಸ್ತಾರವಾಗಿ ಮಾತನಾಡಿ, ಅಧಿವೇಶನ ಮುಗಿದ ನಂತರ ನಾನು ಸೀಬರ್ಡ್ ಯೋಜನೆ, ಕಾರವಾರ ಮತ್ತು ಎಂಟ್ಯೆರ್ ಕೋಸ್ಟಲ್ ಏರಿಯಾಗಳಿಗೆ ಭೇಟಿ ನೀಡುತ್ತಿದ್ದೇನೆ. ನಾನೂ ಇದನ್ನು ಗಮನಿಸಿ, ಇದರ ಬಗ್ಗೆ ಆದಷ್ಟು ಕ್ರಮ ತೆಗೆದುಕೊಳ್ಳಲು ಅಧಿಕಾರಿಗಳ ಮೂಲಕ ಪ್ರಯತ್ನವನ್ನು ಮಾಡುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಂ.ವೈ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ಅಫ್ಜಲ್‌ಪುರ ತಾಲ್ಲೂಕು ಮತ್ತು ಸುರಪುರ ತಾಲ್ಲೂಕಿನಲ್ಲಿ ಅನೇಕಾಲು ರೋಗದಿಂದ.....

ಅಧ್ಯಕ್ಷರು ; ದಯಮಾಡಿ ಸದಸ್ಯರು ಕುಳಿತುಕೊಳ್ಳಬೇಕು.

4.) ಪ್ರಕಟಣೆ

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 9ನೆಯ ನಿಯಮದ ಮೇರೆಗೆ ಈ ಕೆಳಕಂಡ ಸದಸ್ಯರುಗಳನ್ನು ಪ್ರಸ್ತುತ ಅಧಿವೇಶನದ ಸಮಯದಲ್ಲಿ ನನ್ನ ಗೈರುಹಾಜರಿಯಲ್ಲಿ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲು ನಾಮನಿರ್ದೇಶನ ಮಾಡಿದ್ದೇನೆ.

ಶ್ರೀಯುತರುಗಳಾದ :

1. ಡಿ.ಆರ್. ಪಾಟೀಲ್
2. ಅಂಜನಮೂರ್ತಿ
3. ಎ.ಟಿ. ರಾಮಸ್ವಾಮಿ
4. ಆರಗ ಜ್ಞಾನೇಂದ್ರ
5. ಜಗದೀಶ್ ಶೆಟ್ಟರ್
6. ಕೆ. ಜಯಪ್ರಕಾಶ್ ಹೆಗ್ಡೆ

5. ಸಭೆಯ ಮುಂದಿಡಲಾದ ಕಾಗದಪತ್ರಗಳು

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿ) :

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿ) ಅವರ ಪರವಾಗಿ : ಮಾನ್ಯ